5

# ಧರ್ಮಶಾಸ್ತ್ರವು ಇಸ್ರಾಯೇಲ ಜನಾಂಗದ ಧರ್ಮಶಾಸ್ತ್ರದಂತೆ

*"ನಾವು ನಮ್ಮ ದೇವರಾದ ಯೆಹೋವನಿಗೆ ಮೊರೆಯಿಡುವಾಗೆಲ್ಲಾ ಆತನು ಸಮೀಪವಾಗಿಯೇ ಇದ್ದಾನಲ್ಲಾ; ಬೇರೆ ಎಷ್ಟು ದೊಡ್ಡ ಜನಾಂಗಕ್ಕಾದರೂ ಯಾವ ದೇವರು ಹೀಗೆ ಸಮೀಪವಾಗಿರುವನು? ನಾನು ಈ ಹೊತ್ತು ನಿಮ್ಮ ಮುಂದೆ ಇಡುವ ಇಂಥ ನ್ಯಾಯವಾದ ಆಜ್ಞಾವಿಧಿಗಳುಳ್ಳ ಈ ಧರ್ಮಶಾಸ್ತ್ರಕ್ಕೆ ಸಮಾನವಾದದ್ದು ಬೇರೆಯಾವ ಜನಾಂಗಕ್ಕೆ ಉಂಟು?" (ಧರ್ಮೋಪದೇಶಕಾಂಡ 4:7, 8).*

ಇಸ್ರಾಯೇಲ್ಯರೊಂದಿಗೆ ತಾನು ಅವರ ದೇವರಾಗಿರುವೆನು ಮತ್ತು ಅವರನ್ನು ಒಂದು ವಿಶೇಷ ಜನಾಂಗವಾಗಿ ಇಡುವೆನೆಂದು ಒಂದು ಒಡಂಬಡಿಕೆಯನ್ನು ದೇವರು ಮಾಡಿದ್ದನ್ನು ನಾವು ನೋಡಿದ್ದೇವೆ. ಆತನ ಜನಾಂಗ ಹೀಗೆ ಇರಬೇಕೆಂದು ಅವರಿಗೆ ಬೋಧಿಸಲು, ದೇವರು ಧರ್ಮಶಾಸ್ತವನ್ನು ಒದಗಿಸಿಕೊಟ್ಟನು, ಎಲ್ಲಾ ವಿವಿಧ ಕರಾರುಗಳೊಂದಿಗೆ ಇಸ್ರಾಯೇಲ್ಯರಿಗೆ ದೇವರು ಕೊಟ್ಟ ಈ ಧರ್ಮಶಾಸ್ತ್ರವು ಅವರ ಜನಾಂಗದ ಧರ್ಮಶಾಸ್ತ್ರವೂ ಆಗಬೇಕಾಗಿತ್ತು. ಇಸ್ರಾಯೇಲು ದೇವರಾಡಳಿತೆಯುಳ್ಳ, ದೇವರಿಂದ ಆಳಿ ನಡಿಸಲ್ಪಡುವ ಜನಾಂಗವಾಗಬೇಕಿತ್ತು. ಕುಟುಂಬ ಸಂಬಂಧಗಳನ್ನು, ಆಹಾರದ ನಿಯಮಗಳನ್ನು ರಾಜ್ಯದ ವಿಷಯಗಳನ್ನು ಮತ್ತು ಸಮಾಜದ ಜವಾಬ್ದಾರಿಕೆಗಳನ್ನು, ಒಂದಕ್ಕೊಂದು ಸಂಬಂಧಿಸಿದ ನಿಯಮಗಳನ್ನು ಈ ಒಡಂಬಡಿಕೆ ಒಳಗೊಂಡಿತ್ತು. ಅದು ವೈಯಕ್ತಿಕ ಹಾಗೆಯೇ ಧಾರ್ಮಿಕ ಮತ್ತು ನೈತಿಕ ಜವಾಬ್ದಾರಿಕೆಗಳನ್ನು ವಿವರವಾಗಿ ಹೇಳಿತು.

ದೇವರು ಇಸ್ರಾಯೇಲ್ಯರಿಗೆ ಕೊಟ್ಟ ನಿಯಮಗಳು ಯಾವುದೇ ವಿಶೇಷ ಕ್ರಮದಲ್ಲಿ ದಾಖಲೆ ಮಾಡಲ್ಪಟ್ಟಿರುವದಿಲ್ಲ. ನಡತೆಯ ಒಂದೇ ಕ್ಷೇತ್ರಗಳಿಗೆ ಸಂಬಂಧಿಸಿದ ಅನೇಕ ನಿಬಂಧನೆಗಳು ಮಿಶ್ರಮಾಡಲ್ಪಟ್ಟವು, ಆದರೆ ಕೆಲವು ಒಂದು ಗುಂಪಾಗಿ ಮಾಡಲ್ಪಟ್ಟವು. ಅಂಥ ಗುಂಪುಗಳನ್ನು ಮಾಡುವಂಥದ್ದು ವೈಯಕ್ತಿಕ ಸಂಬಂಧಗಳಿಗೆ, ವೈಯಕ್ತಿಕ ಜವಾಬ್ದಾರಿಕೆಗಳಿಗೆ, ನಾಗರಿಕ ವಿಷಯಗಳಿಗೆ, ಧಾರ್ಮಿಕ ಕರ್ತವ್ಯಗಳಿಗೆ ಮತ್ತು ಇತರ ವಿಚಾರಗಳಿಗೆ ಅನ್ವಯಿಸುತ್ತವೆ.

## ಒಂದು ಜನಾಂಗಕ್ಕಾಗಿ ಧರ್ಮಶಾಸ್ತ್ರ

### ಒಂದು ನಿಶ್ಚಿತವಾದ ಜನಾಂಗ

ಸಿನಾಯಿ ಬೆಟ್ಟದಲ್ಲಿ ಇಸ್ರಾಯೇಲ್ಯರಿಗೆ ದೇವರು ಕೊಟ್ಟ ಧರ್ಮಶಾಸ್ತವು ಮೊದಲು ಕೊಡಲ್ಪಟ್ಟಿರಲಿಲ್ಲ. ಅಬ್ರಹಾಮ, ಇಸಾಕ ಮತ್ತು ಯಾಕೋಬರು ಕಾನಾನ್ ದೇಶದಲ್ಲಿ

ಜೀವಿಸುತ್ತಿರುವಾಗ, ಅವರಿಗೆ ಜನಾಂಗಕ್ಕಾಗಿ ಧರ್ಮಶಾಸ್ತ್ರದ ಅವಶ್ಯಕತೆ ಇರಲಿಲ್ಲ. ಐಗುಪ್ತದಲ್ಲಿ ಅವರ ಸಂತತಿಯವರು ಸಹ ತಮ್ಮನ್ನು ಆಳಿ ನಡಿಸಲು ಧರ್ಮಶಾಸ್ತ್ರದ ಅವಶ್ಯಕತೆಯುಳ್ಳವರಾಗಿರಲಿಲ್ಲ, ಯಾಕಂದರೆ ಅವರು ಐಗುಪ್ತದ ನಿಯಮಗಳಿಗೆ ಒಳಪಟ್ಟ ಗುಲಾಮ ಜನಾಂಗವಾಗಿದ್ದರು. ಅವರು ಐಗುಪ್ತನ್ನು ಬಿಟ್ಟನಂತರ ತಮ್ಮ ಸ್ವಂತ ಜನಾಂಗಿಕ ಧರ್ಮಶಾಸತ್ರದ ಅಗತ್ಯತೆಯುಳ್ಳ ಪ್ರತ್ಯೇಕ ಜನಾಂಗವಾದರು. ದೇವರು ಅವರಿಗೆ ಧರ್ಮಶಾಸ್ತ್ರ ಕೊಡುವದರಿಂದ ಪರಿಸ್ಥಿತಿಯ ಪರಿಹಾರ ಮಾಡಿದನು.

"ನಾನು ಈ ಹೊತ್ತು ನಿಮ್ಮ ಮುಂದೆ ಇಡುವ ಇಂಥ ನ್ಯಾಯವಾದ ಆಜ್ಞಾವಿಧಿಗಳುಳ್ಳ ಈ ಧರ್ಮಶಾಸ್ತ್ರಕ್ಕೆ ಸಮಾನವಾದದ್ದು ಬೇರೆ ಯಾವ ಜನಾಂಗಕ್ಕೆ ಉಂಟು?" (ಧರ್ಮೋಪದೇಶಕಾಂಡ 4:8) ಎಂದು ಕೇಳಿದಾಗ ಮೋಶೆಯು ಇತರ ಜನಾಂಗಗಳಿಗೆ ಧರ್ಮಶಾಸ್ತ್ರ ಕೊಡಲ್ಪಟ್ಟಿಲ್ಲ ಎಂದು ಸೂಚಿಸಿದನು.

ದಾವೀದನು ಹೀಗೆ ಬರೆದಿದ್ದಾನೆ:

> ಆತನು ತನ್ನ ವಾಕ್ಯವನ್ನು ಯಾಕೋಬ್ಯರಿಗೆ ತಿಳಿಸುತ್ತಾನೆ,
> ತನ್ನ ನಿಯಮ ವಿಧಿಗಳನ್ನು ಇಸ್ರಾಯೇಲ್ಯರಿಗೆ ಪ್ರಕಟಿಸುತ್ತಾನೆ,
> ಬೇರೆ ಯಾವ ಜನಾಂಗದವರಿಗೂ ಆತನು ಹೀಗೆ ಮಾಡಲಿಲ್ಲ;
> ಆತನ ನ್ಯಾಯ ವಿಧಿಗಳನ್ನು ಅವರು ಅರಿಯರು,
> ಯಾಹುವಿಗೆ ಸ್ತೋತ್ರ! (ಕೀರ್ತನೆ 147: 19, 20).

ಪೌಲನೂ ಸಹ ಈ ಸತ್ಯವನ್ನು ಬೋಧಿಸಿದನು: "ಧರ್ಮಶಾಸ್ತ್ರವಿಲ್ಲದ ಅನ್ಯಜನರು ಸ್ವಾಭಾವಿಕವಾಗಿ ಧರ್ಮಶಾಸ್ತ್ರದಲ್ಲಿ ಹೇಳಿದಂತೆ ನಡೆದರೆ ಅವರು ಧರ್ಮಶಾಸ್ತ್ರವಿಲ್ಲದವರಾಗಿದ್ದರೂ ತಾವೇ ತಮಗೆ ಧರ್ಮ ಪ್ರಮಾಣವಾಗಿದ್ದಾರೆ" (ರೋಮಾಪುರ 2:14). ಧರ್ಮಶಾಸ್ತ್ರವಿಲ್ಲದವರೂ ಇದ್ದರೆಂದು ಪೌಲನು 1 ಕೊರಿಂಥ 9:21ರಲ್ಲಿ ಸೂಚಿಸುತ್ತಾನೆ. ಧರ್ಮಶಾಸ್ತ್ರದ ಅಧೀನತೆಯಲ್ಲಿ ಪಾಪ ಮಾಡಿದವರು ಮಾತ್ರವೇ ಧರ್ಮಶಾಸ್ತ್ರದಿಂದ ನ್ಯಾಯವಿಚಾರಣೆ ಮಾಡಲ್ಪಡುತ್ತಾರೆ (ರೋಮಾಪುರ 2:12).

ದಶಾಜ್ಞೆಗಳ ವಿಸ್ತರಣೆಯಾದ ಧರ್ಮಶಾಸ್ತ್ರವು (ವಿಮೋಚನಕಾಂಡ 34:27, 28; 1 ಅರಸುಗಳು 8:9, 21), ಇಸ್ರಾಯೇಲ್ಯರಿಗೆ ಮಾತ್ರವೇ ಕೊಡಲ್ಪಟ್ಟಿತು. ಆತನು ಐಗುಪ್ತದ ದಾಸತ್ವದೊಳಗಿಂದ ಬಿಡುಗಡೆ ಮಾಡಿದ ಇಸ್ರಾಯೇಲು ಜನಾಂಗವು ದೇವರು ಆಯ್ದುಕೊಂಡ ಜನಾಂಗವಾಗಿತ್ತು.

**ಒಂದು ನಿಶ್ಚಿತ ದೇಶ**

ದೇವರಿಂದ ಕೊಡಲ್ಪಟ್ಟ ಒಡಂಬಡಿಕೆಯು ಇಸ್ರಾಯೇಲ ದೇಶದಲ್ಲಿ ಕೈಕೊಳ್ಳಲ್ಪಡಬೇಕಾಗಿತ್ತು, ಯಾಕಂದರೆ ಕೆಲವು ನಿಬಂಧನೆಗಳು ಅವರ ದೇಶದ ಮೇರೆಯ ಹೊರಗೆ ಕೈಕೊಳ್ಳಲು ಕಠಿಣವಾಗಿದ್ದವು. "ನೀವು ಸ್ವಾಧೀನ ಮಾಡಿಕೊಳ್ಳುವದಕ್ಕೆ ಹೋಗುವ ದೇಶದಲ್ಲಿ ಅನುಸರಿಸಬೇಕಾದ ಆಜ್ಞಾವಿಧಿಗಳನ್ನು ನನ್ನ ದೇವರಾದ ಯೆಹೋವನು ನನಗೆ ಆಜ್ಞಾಪಿಸಿದಂತೆಯೇ ನಿಮಗೆ ಬೋಧಿಸಿದ್ದೇನೆ" ಎಂದು ಮೋಶೆ ಹೇಳಿದನು (ಧರ್ಮೋಪದೇಶಕಾಂಡ 4:5; ನೋಡಿರಿ 6:1, 2).

**ಒಂದು ನಿಶ್ಚಿತವಾದ ಪಟ್ಟಣ**

ದೇವರು ತಾನಾಯ್ದುಕೊಂಡ ಸ್ಥಳದಲ್ಲಿ ತನ್ನನ್ನು ಹುಡುಕಬೇಕೆಂದು

ಇಸ್ರಾಯೇಲ್ಯರಿಗೆ ಆಜ್ಞಾಪಿಸಿದನು (ಧರ್ಮೋಪದೇಶಕಾಂಡ 12:5-7). ಈ ಸ್ಥಳವು "ಯೆರೂಸಲೇಮ" ಪಟ್ಟಣವಾಗಿತ್ತು; ತನ್ನ ಹೆಸರನ್ನು ಇಡುವದಕ್ಕಾಗಿ ಇಸ್ರಾಯೇಲಿನ ಎಲ್ಲಾ ಕುಲಗಳಿಂದ ಕರ್ತನು ಇದನ್ನು ಆಯ್ದುಕೊಂಡಿದ್ದನು (1 ಅರಸುಗಳು 14:21ಬಿ; ನೋಡಿರಿ 1 ಅರಸುಗಳು 11:13; 2 ಅರಸುಗಳು 21:4, 7). ಇಸ್ರಾಯೇಲ ದೇಶದ ಬಾಹ್ಯ ಅಂಚುಗಳಲ್ಲಿ ಜೀವಿಸುತ್ತಿರುವವರಿಗೆ ಯೆರೂಸಲೇಮಿಗೆ ಹೋಗುವದು ಬಹಳ ಪ್ರಯಾಸವಾಗುತ್ತಿತ್ತು, ಎಲ್ಲಾ ಲೋಕದ ಜನರೂ ಹೀಗೆ ಮಾಡಬೇಕೆಂದು ಹೇಳಲ್ಪಟ್ಟಿದ್ದರೆ ಆ ಆಜ್ಞೆಯು ಅಸಾಧ್ಯವಾದದ್ದಾಗುತ್ತಿತ್ತು.

ಇಸ್ರಾಯೇಲ್ಯರು ವಾಗ್ದತ್ತ ದೇಶವನ್ನು ಪ್ರವೇಶಿಸಿದಾಗ ದೇವರು ಅವರಿಗೆ ನಿರ್ದೇಶಿಸಿದನು:

> ನಾನು ನಿಮಗೆ ಆಜ್ಞಾಪಿಸಿದ ಎಲ್ಲಾ ಕಾಣಿಕೆಗಳನ್ನು ಅಂದರೆ ಸರ್ವಾಂಗ ಹೋಮಗಳೇ ಮುಂತಾದ ಯಜ್ಞ ಪಶುಗಳನ್ನೂ ಬೆಳೆಯ ದಶಮಾಂಶಗಳನ್ನೂ ಯೆಹೋವನಿಗೋಸ್ಕರ ಪ್ರತ್ಯೇಕಿಸುವ ಪದಾರ್ಥಗಳನ್ನೂ ಹರಕೆ ಮಾಡಿದ ವಿಶೇಷವಾದ ಕಾಣಿಕೆಗಳನ್ನೂ ಇವುಗಳನ್ನೆಲ್ಲಾ ನಿಮ್ಮ ದೇವರಾದ ಯೆಹೋವನು ತನ್ನ ಹೆಸರನ್ನು ಸ್ಥಾಪಿಸುವದಕ್ಕೆ ಆದುಕೊಳ್ಳುವ ಸ್ಥಳಕ್ಕೇ ತರತಕ್ಕದ್ದು (ಧರ್ಮೋಪ ದೇಶಕಾಂಡ 12:11; ನೋಡಿರಿ 26:2).

ಜನರು ತಮ್ಮ ಧಾನ್ಯದ ದಶಮಾಂಶವನ್ನಾಗಲಿ ಇಲ್ಲವೇ ತಮ್ಮ ಮಂದೆಗಳಲ್ಲಿ ಚೊಚ್ಚಲಾದವುಗಳನ್ನಾಗಲೀ ಈ ಸ್ಥಳದಲ್ಲಿ ಯೆರೂಸಲೇಮಿನಲ್ಲಿ ತಿನ್ನಬೇಕಾಗಿತ್ತು. ಇವುಗಳನ್ನು ದೇವರು ಆಯ್ದುಕೊಂಡ ಸ್ಥಲಕ್ಕೆ ತರಲಾರದಷ್ಟು ದೂರದಲ್ಲಿದ್ದರೆ ಅವರು ಅವುಗಳನ್ನು ಹಣವಾಗಿ ಬದಲಾಯಿಸಿ ತಮಗೆ ತಕ್ಕದ್ದನ್ನು ಕೊಂಡುಕೊಂಡು, ದೇವರು ಆಯ್ದುಕೊಂಡ ಸ್ಥಳದಲ್ಲಿ ತಿನ್ನಬಹುದಾಗಿತ್ತು (ಧರ್ಮೋಪದೇಶಕಾಂಡ 12:17-22, 26-28; 14:23-26).

ದೇವರು ಆಯ್ದುಕೊಂಡ ಪಟ್ಟಣವು ಎಲ್ಲಾ ಯಜ್ಞಗಳು ಅರ್ಪಿಸಲ್ಪಡಬೇಕಾಗಿದ್ದ ಪಟ್ಟಣವಾಗಿತ್ತು (ಧರ್ಮೋಪದೇಶಕಾಂಡ 12:13, 14, 26). ಮೂರು ವಾರ್ಷಿಕ ಹಬ್ಬಗಳು (ಪಸ್ಕ ಹಬ್ಬ, ವಾರಗಳ ಹಬ್ಬ, ಮತ್ತು ಪರ್ಣಶಾಲೆಗಳ ಹಬ್ಬ; ಧರ್ಮೋಪ ದೇಶಕಾಂಡ 16:2-15) ಅಲ್ಲಿ ಆಚರಿಸಲ್ಪಡಬೇಕಾಗಿದ್ದವು. ಈ ಹಬ್ಬಗಳ ಸಮಯದಲ್ಲಿ ಎಲ್ಲಾ ಪುರುಷರು ಕಾಣಿಸಿಕೊಳ್ಳಬೇಕಾಗಿತ್ತು (ಧರ್ಮೋಪದೇಶಕಾಂಡ 16:16).

ನ್ಯಾಯಾಲಯ ವ್ಯಾಜ್ಯಗಳು ಈ ಪಟ್ಟಣದಲ್ಲಿ ಯಾಜಕರಿಂದ ವಿಚಾರಿಸಲ್ಪಡ ಬೇಕಾಗಿದ್ದವು (ಧರ್ಮೋಪದೇಶಕಾಂಡ 17:8-13). ಈ ಸ್ಥಳದಲ್ಲಿ ಪ್ರತೀ ಏಳನೆಯ ಪರ್ಣ ಶಾಲೆಗಳ ಹಬ್ಬದ ಸಮಯದಲ್ಲಿ ಧರ್ಮಶಾಸ್ತ್ರವು ಓದಲ್ಪಡತಕ್ಕದ್ದು (ಧರ್ಮೋಪ ದೇಶಕಾಂಡ 31:10, 11).

## ದೇವರಿಂದ ಒಂದು ಧರ್ಮಶಾಸ್ತ್ರ

ದೇವರು ಆಜ್ಞಾಪಿಸಿದ ನಿಬಂಧನೆಗಳನ್ನೂ ನ್ಯಾಯವಿಧಿಗಳನ್ನೂ ಇಸ್ರಾಯೇಲ್ಯರಿಗೆ ತಾನು ಕೊಟ್ಟೆನೆಂದು ಮೋಶೆ ಹೇಳಿದ್ದಾನೆ. ಇದು ದೇವರ ಆಜ್ಞೆಗಳಾಗಿವೆ, ಮೋಶೆಯಿಂದ ಶೋಧಿಸಿ ತೆಗೆದ ನೇಮಗಳೂ ನಿಯಮಗಳೂ ಆಗಿರುವದಿಲ್ಲ. ಯಾಜಕಕಾಂಡದಲ್ಲಿ ಆಜ್ಞೆಗಳನ್ನು ಕೊಟ್ಟ ನಂತರ, ಮೋಶೆ ಹೀಗೆ ಬರೆದನು: "ಯೆಹೋವನು ಸೀನಾಯಿ ಬೆಟ್ಟದಲ್ಲಿ ಮೋಶೆಯ ಮೂಲಕ ಇಸ್ರಾಯೇಲ್ಯರಿಗೆ ಕೊಟ್ಟ ಆಜ್ಞೆಗಳು ಇವೇ"

(ಯಾಜಕಕಾಂಡ 27:34).

ಧರ್ಮಶಾಸ್ತ್ರದ ಆಜ್ಞೆಗಳನ್ನು, ನಿಬಂಧನೆಗಳನ್ನೂ ವಿಧಿನಿಯಮಗಳನ್ನೂ ಕೊಡುವಾಗ, ಮೋಶೆಯು ಇಸ್ರಾಯೇಲ್ಯರಿಗೆ ಅವು ದೇವರಿಂದ ಬಂದಿವೆ, ಅದರ ಅರ್ಥ ಅವು ಮೋಶೆಯಿಂದ ಬಂಥವುಗಳಲ್ಲ ಎಂಬುದನ್ನು ಪುನಃ ಪುನಃ ಜ್ಞಾಪಕಕ್ಕೆ ತಂದನು. ಈ ಹೇಳಿಕೆಗಳ ಉದಾಹರಣೆಗಳು ಇಲ್ಲಿವೇ: "ಯೆಹೋವನು ಮೋಶೆಯ ಮೂಲಕ ಈ ಆಜ್ಞೆಗಳನ್ನು ಕೊಟ್ಟ ದಿನ ಮೊದಲುಗೊಂಡು ನಿಮ್ಮ ಎಲ್ಲಾ ತಲಾಂತರಗಳವರೆಗೂ ಯಾವಾಗಲಾದರೂ ಸಮೂಹದವರು ತಿಳಿಯದೆ ಇವುಗಳಲ್ಲಿ ..." (ಅರಣ್ಯಕಾಂಡ 15:22-24), "ಆದುದರಿಂದ ನೀವು ಈಗ ನಾನು ನಿಮಗೆ ಹೇಳುವ ಆತನ ಮಾತುಗಳಿಗೆ ಕಿವಿಗೊಟ್ಟು ಆತನ ಆಜ್ಞಾವಿಧಿಗಳನ್ನು ಅನುಸರಿಸಬೇಕು ಎಂದು ಹೇಳಿದನು" (ಧರ್ಮೋಪದೇಶಕಾಂಡ 27:10)[1] "ಕರ್ತನು ಮೋಶೆಗೆ ಹೇಳಿದನು" ಎಂಬಂಥ ಹೇಳಿಕೆಗಳು (ಯಾಜಕಕಾಂಡ 18:1; 19:1; 20:1; ಅರಣ್ಯಕಾಂಡ 8:23; 15:1) ಇಸ್ರಾಯೇಲ್ಯರಿಗೆ ಕೊಡಲ್ಪಟ್ಟದ್ದು ದೇವರ ಧರ್ಮಶಾಸ್ತ್ರವಾಗಿತ್ತು ಮತ್ತು ಅದು ಮೋಶೆಯಿಂದ ಉತ್ಪತ್ತಿಯಾದ ನಿಯಮವಲ್ಲ ಎಂಬುದನ್ನು ಸೂಚಿಸುತ್ತದೆ.

ಮೋಶೆಯು ಆಜ್ಞಾಪಿಸಿದ್ದು ದೇವರಿಂದ ಬಂದದ್ದೆಂದು ಸಾಧಿಸಲು ನಾವು ಪ್ರಯಾಸಪಡುತ್ತಿದ್ದೇವೆಂದು ತೋರಿದರೂ, ಪುರಾವೆಯ ಭಾರವನ್ನು ಮುಂದಿಡುವುದು ಅಗತ್ಯವಾದದ್ದಾಗಿದೆ, "ಮೋಶೆಯ ಧರ್ಮಶಾಸ್ತ್ರ" ಮತ್ತು "ದೇವರ ಧರ್ಮಶಾಸ್ತ್ರ" ಇವುಗಳ ಮಧ್ಯದಲ್ಲಿ ಭಿನ್ನತೆ ಮಾಡಲು ಕೆಲವರು ಪ್ರಯತ್ನಿಸುತ್ತಾರೆ. ಅಂಥ ಭಿನ್ನತೆ ಮಾಡುವದಕ್ಕೆ ಹಳೇ ಒಡಂಬಡಿಕೆಯ ಬೋಧನೆಯಲ್ಲಾಗಲಿ ಇಲ್ಲವೇ ಹೊಸ ಒಡಂಬಡಿಕೆಯ ಬೋಧನೆಯಲ್ಲಾಗಲೀ ಯಾವ ಆಧಾರವಿರುವದಿಲ್ಲ. ಮೋಶೆಯ ಮುಖಾಂತರ ದೇವರು ಕೊಟ್ಟ ಎಲ್ಲವೂ - ಆಜ್ಞೆಗಳು, ನಿಬಂಧನೆಗಳು, ನ್ಯಾಯವಿಧಿಗಳು, ನಿಯಮಗಳು ಧರ್ಮಶಾಸ್ತ್ರವಾಗಿದ್ದವು, ಕೆಲವು ಸಮಯಗಳಲ್ಲಿ ಅದು, "ಮೋಶೆಯ ಧರ್ಮಶಾಸ್ತ್ರ" ಎಂದು (ಯೆಹೋಶುವ 8:31; 1 ಅರಸುಗಳು 2:3) ಕರೆಯಲ್ಪಟ್ಟರೂ, ಅದು ಅವನ ಧರ್ಮಶಾಸ್ತ್ರವಾಗಿರುವದಿಲ್ಲ. ಅದೇ ರೀತಿಯಲ್ಲಿ ಸುವಾರ್ತೆ ಮತ್ತು ಅವರ ಎಲ್ಲಾ ಬೋಧನೆಗಳು ಕ್ರಿಸ್ತನವುಗಳಾಗಿದ್ದರೂ ಪೌಲನು "ನನ್ನ ಸುವಾರ್ತೆ" ಎಂದು ಉಲ್ಲೇಖಿಸಿದ್ದನು (ರೋಮಾಪುರ 2:16; 16:25) ಮತ್ತು "ಅಪೊಸ್ತಲರ ಬೋಧನೆ" ಎಂಬ ಮಾತನ್ನು ನಾವು ಉಪಯೋಗಿಸುವೆವು (ಅಪೊಸ್ತಲರ ಕೃತ್ಯ 2:42).

## ದಂಡನೆಗಳೊಂದಿಗೆ ಧರ್ಮಶಾಸ್ತ್ರ

ಈ ನಿಯಮಗಳಲ್ಲಿ ಯಾವುದಾದರೂ ಮುರಿಯಲ್ಪಡುವುದು ಕೆಲವೊಂದು ಶಿಕ್ಷೆಗಳಲ್ಲಿ ಪರಿಣಾಮಗೊಂಡಿತು, ಅನೇಕ ಅತಿಕ್ರಮಣಗಳಿಗೆ ಮರಣ ದಂಡನೆ ಇತ್ತು, ಇತರವುಗಳಲ್ಲಿ ಅಪರಾಧಿಯು ಪರಿಹಾರ ಕೊಡಬೇಕಾಗಿತ್ತು ಇಲ್ಲವೇ ನೋವು ಮಾಡಿದವನು ನೋವು ಹೊಂದಿದವನಿಂದ ಅದೇ ಶಿಕ್ಷೆ ಹೊಂದಬೇಕಾಗಿತ್ತು. ತಪ್ಪು ಹೊಂದಿದವನೊಂದಿಗೆ ಸರಿಪಡಿಸಿಕೊಳ್ಳುವದಲ್ಲದೇ, ಯೋಗ್ಯ ಯಜ್ಞದ ಮುಖಾಂತರ ಉದ್ದೇಶವಿಲ್ಲದೇ ಮಾಡಿದ ಅಪರಾಧಗಳಿಗಾಗಿ ದೇವರಿಗೆ ಅರ್ಪಣೆಗಳು ಮಾಡಲ್ಪಡಬೇಕಾಗುತ್ತಿತ್ತು (ಯಾಜಕಕಾಂಡ 4:27-35). ಇಂದು ಕೆಲವು ನ್ಯಾಯಪದ್ಧತಿಗಳಿಂದ ಕೇಳಲ್ಪಡುವ ನ್ಯಾಯಾಲಯ ದಂಡವನ್ನು ಕೊಡುವದಕ್ಕಿಂತ ದೇವರು ಪರಿಹಾರವನ್ನು ಮತ್ತು/ಇಲ್ಲವೇ ಯಜ್ಞವನ್ನು ಹೆಚ್ಚಾಗಿ ಬಯಸಿದನು.

## ಮುಕ್ತಾಯ

ಮೋಶೆಯ ಮುಖಾಂತರ ಇಸ್ರಾಯೇಲ್ಯರಿಗೆ ದೇವರು ಕೊಟ್ಟ ನಿಯಮಗಳು ವಿಶೇಷವಾಗಿ ಅವರಿಗೆ ಜನಾಂಗವಾಗಿ ವಿಧೇಯರಾಗುವದಕ್ಕಾಗಿ ಇದ್ದವು; ಅವು ಬೇರೆ ಜನಾಂಗಗಳಿಗಾಗಿ ಇರಲಿಲ್ಲ. ಈ ನಿಯಮಗಳು ಜನಾಂಗದ ವೈಯಕ್ತಿಕ, ನಾಗರಿಕ, ಮತ್ತು ಧಾರ್ಮಿಕ ಜೀವನದ ಹೆಚ್ಚಾದ ವಿಷಯಗಳನ್ನು ನಿರ್ದೇಶಿಸಿದ ವಿವರಣೆಗಳನ್ನು ಒಳಗೊಂಡಿದ್ದವು. ಈ ನಿಯಮಗಳಿಗೆ ವಿಧೇಯತೆಯು ಇಸ್ರಾಯೇಲನ್ನು ಬೇರೆಯಾಗಿ, ದೇವರ ಆಯ್ದುಕೊಂಡ ಜನಾಂಗವಾಗಿ ಕಾಪಾಡುವುದು.

---

ಟಿಪ್ಪಣಿ

[1]ಧರ್ಮೋಪದೇಶಕಾಂಡ 4:40; 8:11; 10:13; 11:27, 28; 13:18; 28:1, 13, 15; 30:8ರಲ್ಲಿ ಇಂಥ ಹೇಳಿಕೆಗಳು ಕೊಡಲ್ಪಟ್ಟಿವೆ.

© 2009 Truth for Today